**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. 20–2011**

| | | |
|---|---|---|
| ಹೆಸರು | ಶಿವರುದ್ರಯ್ಯ | ಪ್ರಾ.ಸಾ.1 |
| ತಂದೆ/ಗಂಡನ ಹೆಸರು | ಚಿಕ್ಕಕೆಂಡಯ್ಯ | ಚಾ.ಸಾ.4 |
| ವಯಸ್ಸು | 63 ವರ್ಷ | |
| ಕೆಲಸ | ನಿವೃತ್ತ ಅಬಕಾರಿ ಆರಕ್ಷಕ | ಸಾ.ಪ್ರ.ವ.ಬೋ |
| ವಾಸ | ಹೊಸಕೋಟೆ | ದಿ: 27.10.2022 |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿರವರಿಂದ: –**

ನಾನು ದಿ:17.05.2007 ರಿಂದ ದಿ:31.12.2019 ವರೆಗೆ ಹೊಸಕೋಟೆ ವಲಯದ ಅಬಕಾರಿ ಆರಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 18.10.2010 ರಂದು ಬೆಂ.ಗ್ರಾ. ಹೊಸಕೋಟೆ ತಾಲ್ಲೂಕು , ನಂದಗುಡಿ ಹೋಬಳಿಯ ದಿನ್ನಹಳ್ಳಿ ಗ್ರಾಮದ ಕೊಂಡರಹಳ್ಳಿಗೆ ಹೋಗುವ ರಸ್ತೆ ಮಧ್ಯೆ ಇರುವ ತೆಂಗಿನ ತೋಟದಲ್ಲಿ ಅಕ್ರಮವಾಗಿ ಸೇಂಧಿಯನ್ನು ಮಾರಾಟ ಮಾಡುವ ಮಾಹಿತಿ ಮೇರೆಗೆ ನಾನು ಮತ್ತು ಚಾ.ಸಾ.1 ರವರು ಮತ್ತು ಚಾ.ಸಾ.5 ರವರು ಸೇರಿ ಸದರಿ ಸ್ಥಳಕ್ಕೆ ಹೋಗಿ, ವಾಹನವನ್ನು ನಿಲ್ಲಿಸಲಾಗಿ ಸದರಿ ಗುಡಿಸಿನ ಮುಂಭಾಗದಲ್ಲಿ ಸುಮಾರು 10 ರಿಂದ 15 ಜನರ ಗುಂಪು ಕಂಡು ಬಂದಿತ್ತು. ಆಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಅವರುಗಳಲ್ಲಿ ಹಲವರು ಓಡಿ ಹೋದರು. ನಂತರ ನಾವು ಗುಡಿಸಿಲಿನ ಹತ್ತಿರ ಹೋಗಿ ನೋಡಲಾಗಿ ಗುಡಿಸಿಲಿನ ಒಳಗಡೆ ಒಬ್ಬ ಆಸಾಮಿ ಇದ್ದು, ನಂತರ ಗುಡಿಸಿಲಿನ್ನನ್ನು ಶೋಧನ ಮಾಡಲು ನ್ಯಾಯಾಲಯದಿಂದ ಶೋಧನಾ ವಾರೆಂಟ್ ಅನ್ನು ತರಲು ಕಾಲವಕಾಶ ಇಲ್ಲದ ಕಾರಣ ಸ್ಥಳದಲ್ಲಿದ್ದ ಕೆಲವರನ್ನು ಕರೆದು ಗುಡಿಸಲನ್ನು ಶೋಧನೆ ಮಾಡಲು ಪಂಚರಾಗಲು ಕೇಳಿಕೊಂಡಾಗ ಅದಕ್ಕೆ ಅವರು ಒಪ್ಪಿದ್ದರಿಂದ, ಸ್ಥಳದಲ್ಲಿ ಶೋಧನಾ ವಾರೆಂಟ್ ಅನ್ನು ತಯಾರಿಸಿ, ಸದರಿ ಗುಡಿಸಲನ್ನು ಶೋಧನೆ ಮಾಡಿದಾಗ ಗುಡಿಸಿಲಿನ ಬಾಗಿಲಿನ ಪಕ್ಕದಲ್ಲಿ ಒಂದು ಪ್ಲಾಸ್ಟಿಕ್ ಬಿಂದಿಗೆ ಕಂಡು ಬಂದಿತ್ತು. ಸದರಿ ಬಿಂದಿಗೆಯನ್ನು ಹೊರತೆಗೆದು ನೋಡಲಾಗಿ ಸುಮಾರು 12 ಲೀಟರ್ ಅಷ್ಟು ಸೇಂದಿ ಇರುವುದು ಕಂಡು ಬಂದಿತ್ತು. ಸದರಿ ಗುಡಿಸಿಲಿನಲ್ಲಿದ್ದ ಆಸಾಮಿಯನ್ನು ವಿಚಾರಿಸಿದಾಗ ಸೇಂದಿಯನ್ನು ಶೇಖರಣೆ ಮಾಡಿ, ಮಾರಾಟ ಮಾಡಲು ಪರವಾನಿಗೆ ಇದ್ದ ಬಗ್ಗೆ ಕೇಳಲಾಗಿ ಆಸಾಮಿ ಇರುವುದಿಲ್ಲ ಎಂದು ತಿಳಿಸಿದ. ನಂತರ ಯಾವುದೇ ಪರವಾನಿಗೆ ಇಲ್ಲದೇ ಮಾರಾಟ ಮಾಡುವುದು ಅಪರಾಧವಾದ ಕಾರಣ ಸದರಿ ಬಿಂದಿಗೆಯಲ್ಲಿದ್ದ ಒಂದು ಲೀಟರ್ ಅಷ್ಟು ಸೇಂದಿಯನ್ನು ರಾಸಾಯನಿಕ ಪರೀಕ್ಷೆಗೆ ಮಾದರಿಗಾಗಿ ತೆಗೆದುಕೊಂಡು, ಸದರಿ ಬಾಟಲ್ ಗೆ ಬಿಳಿ ಬಟ್ಟೆ ಸುತ್ತಿ ದಾರದಿಂದ ಕಟ್ಟಿ ಇಲಾಖಾ ಸೀಲ್ ನಿಂದ ಸೀಲ್ ಮಾಡಿ, ನಂತರ ಇಬ್ಬರು ಮಹಜರ ಸಾಕ್ಷಿಗಳನ್ನು ಪಡೆದು, ಭದ್ರತಾ ಚೀಟಿಯನ್ನು ತಯಾರಿಸಿ, ಪ್ಲಾಸ್ಟಿಕ್ ಬಿಂದಿಗೆ ಮತ್ತು ಬಾಟಲಿಗೆ ಅಂಟಿಸಲಾಯಿತು. ನಂತರ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರ ಕ್ರಮವನ್ನು ಜರುಗಿಸಿ, ಮಧ್ಯಾಹ್ನ 3.30 ರಿಂದ 4 ಗಂಟೆಯವರೆಗೆ ಪಂಚನಾಮೆಯನ್ನು ತಯಾರಿಸಲಾಯಿತು. ನಂತರ ಮು.ಮಾಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು, ಸದರಿ ಆರೋಪಿಯನ್ನು ದಸ್ತಗಿರಿ ಮಾಡಲಾಯಿತು.

ಸಾಕ್ಷಿ ದಿ: 18.10.2010 ರ ಪಂಚನಾಮೆ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಪಂಚನಾಮೆಯನ್ನು ನಿಪಿ.1 ಎಂದು, ಸಾಕ್ಷಿ ಸಹಿಯನ್ನು ನಿಪಿ.1 (ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಖಾಲಿ ಪ್ಲಾಸ್ಟಿಕ್ ಬಾಟಲ್ ಅನ್ನು ನೋಡಿ ಗುರುತಿಸಿದ್ದರಿಂದ , ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ನಿಪಿ.1 ಅನ್ನು ತಯಾರಿಸಿದ ಸ್ಥಳದ ಚಕ್ಕುಬಂದಿ ಪೂ ಮತ್ತು ಪ–ಜಮೀನು, ಉ–ರಸ್ತೆ, ದ–ಗುಡಿಸಲು ಇರುತ್ತದೆ.

**<u>ಪಾಟಿ ಸವಾಲು : ಆರೋಪಿ ಪರ ವಕೀಲರಿಂದ</u>**

ಚಾ.ಸಾ.1 ರವರಿಗೆ ಘಟನೆ ಕುರಿತು ಮಾಹಿತಿ ಕರೆ ಮುಖಾಂತರ ತಿಳಿದಿರುತ್ತದೆ. ಸದರಿ ಮಾಹಿತಿ ಬಂದಾಗ ನಾನು ನ್ಯಾಯಾಲಯದ ಕರ್ತವ್ಯದಲ್ಲಿದ್ದೇ ಎಂದರೆ ಸರಿಯಲ್ಲ. ಸದರಿ ದಿನ ನಾವು ಠಾಣೆಯಿಂದ 3 ಗಂಟೆಗೆ ಹೊರಟು, ನಂದಗುಡಿ ಬೈಲನರಸಾಪುರ ಮಾರ್ಗವಾಗಿ ಘಟನಾ ಸ್ಥಳವನ್ನು 3.30 ಗಂಟೆಗೆ ತಲುಪಿರುತ್ತೇವೆ. ಘಟನಾ ಸ್ಥಳಕ್ಕೆ ನಾವು ಟಾಟಾ ಸುಮೋ ವಾಹನದಲ್ಲಿ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋದಾಗ ಹದಿನೈದು ಜನ ಇದ್ದರು, ಅದರಲ್ಲಿ ಕೆಲವು ಜನ ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ, ಅಲ್ಲಿಯೇ ಇದ್ದ ನಾಲ್ಕು ಜನ ಹೆಸರುಗಳು, ಮುನಿಶ್ಯಾಮಿ, ಎಂ.ವೆಂಕಟೇಶಪ್ಪ, ರಾಜೇಶ್, ಪ್ರಕಾಶ ಇರುತ್ತಾರೆ. ಘಟನಾ ಸ್ಥಳದಲ್ಲಿದ್ದ ಬಿಂದಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ನಿಪಿ.1 ರಲ್ಲಿ ನಮೂದು ಮಾಡಿರುವ ಬಿಂದಿಗೆಯಲ್ಲಿದ್ದ ಸೇಂದಿಯ ಪ್ರಮಾಣ 12 ಸಾವಿರ ಲೀಟರ್ ಇರುತ್ತದೆ ಎಂದರೆ ಸಾಕ್ಷಿಯು ಅದು 12.000 ಲೀಟರ್ ಎಂದು ನಮೂದು ಮಾಡಿರುತ್ತದೆ ಎಂದು ಹೇಳಿರುತ್ತಾರೆ. ಸಾಮಾನ್ಯವಾಗಿ ಬಿಂದಿಗೆಗಳಲ್ಲಿ ಕೇವಲ 8 ರಿಂದ 10 ಲೀಟರ್ ದ್ರವ್ಯ ಮಾತ್ರ ಹಿಡಿಸುತ್ತದೆ ಎಂದರೆ ಸರಿಯಲ್ಲ. ಘಟನೆ ನಡೆದ ದಿನ ನಾನು ನ್ಯಾಯಾಲಯದ ಕರ್ತವ್ಯದಲ್ಲಿದ್ದು, ಯಾವುದೇ ಸ್ಥಳಕ್ಕೆ ಭೇಟಿ ನೀಡಿಲ್ಲ, ಮತ್ತು ನಿಪಿ.1 ಕ್ಕೆ ಠಾಣೆಯಲ್ಲಿಯೇ ಕುಳಿತು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಯಾವುದೇ ಮು.ಮಾ ವನ್ನು ಅಮಾನತ್ತುಪಡಿಸಿಕೊಳ್ಳದೇ ನನ್ನ ಮೇಲಾಧಿಕಾರಿ ಮಾತುಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿರುವ ಪೂಪ ತೋರಿಸಿರುವ ಜಮೀನುಗಳ ಸರ್ವೆ ನಂ. ವಿಚಾರಿಸಿರುವುದಿಲ್ಲ. ನಿಪಿ.1 ಅನ್ನು ಠಾಣೆಯಲ್ಲಿ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ಮು.ಮಾ.1 ರ ಮೇಲೆ ಅದು ಯಾವ ಪ್ರಕರಣಕ್ಕೆ ಸಂಬಂಧಿಸಿದ್ದು ಎಂದು, ಯಾವುದೇ ಗುರುತಿನ ಚೀಟಿ ಇರುವುದಿಲ್ಲ ಎಂದರೆ ಸಾಕ್ಷಿಯು ಅಮಾನತ್ತು ಪಡಿಸಿಕೊಂಡ ಸಂದರ್ಭದಲ್ಲಿ ಮು.ಮಾ.1 ರ ಮೇಲೆ ಗುರುತಿನ ಚೀಟಿ ಅಂಟಿಸಿದ್ದು, ಈಗ ಅದು ನಾಶವಾಗಿ ಹೋಗಿರುತ್ತದೆ ಎಂದು ಹೇಳಿರುತ್ತಾರೆ. ಮು.ಮಾ.1 ಅನ್ನು ಸೃಷ್ಟಿಸಿ, ಹಾಜರುಪಡಿಸಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಸಕೋಟೆ.**